# ಸಂಗೀತದಲ್ಲಿ ಭಾವನೆಗಳ ಅಭಿವ್ಯಕ್ತಿ



ಸುಮೇಧ ಕೆ.



'ನಮ್ಮ ಮನದ ಭಾವನೆಗಳನ್ನು ಸ್ವತಂತ್ರವಾಗಿ ಅಭಿವ್ಯಕ್ತಿಸಲು ಇಂಡೀ ಅತ್ಯಂತ ಸೂಕ್ತ ಮಾಧ್ಯಮ. ಇದನ್ನು ವಾಣಿಜ್ಯ ಉದ್ದೇಶಕ್ಕಾಗಿ ಬಳಸಬಾರದು, ಇದಕ್ಕೊಂದು 'ಕಮರ್ಷಿಯಲ್ ಲೇಬಲ್' ಅಂತ ಇರಬಾರದು. ಇದು ಹೆಚ್ಚು ಜನರನ್ನು ತಲುಪಬೇಕು, ಜನ ಎಂಜಾಯ್ ಮಾಡಬೇಕು ಎಂಬ ಕಾರಣಕ್ಕಾಗಿ ನಾನು ಈ ಸ್ವತಂತ್ರ ಸಂಗೀತಕ್ಕೆ ಆತುಕೊಂಡಿದ್ದೇನೆ' ಎಂಬುದು ಯುವ ಇಂಡೀ ಗಾಯಕ, ಡಿಸೈನಿಂಗ್ ಪದವಿ ವಿದ್ಯಾರ್ಥಿ ಸುಮೇಧ ಕೆ. ಅಭಿಪ್ರಾಯ.

ಸುಮೇಧ ಹಾಡಿದ 'ತುಳಸಿ' ಬಿಡುಗಡೆಯಾಗಿ ಒಂದು ತಿಂಗಳಲ್ಲೇ 8 ಮಿಲಿಯನ್‌ಗೂ ಹೆಚ್ಚು ಕೇಳುಗರನ್ನು ತಲುಪಿದೆ. ಅಂದಹಾಗೆ ಸುಮೇಧ 'ಸು ಫ್ರಂ ಸೋ' ಸಿನಿಮಾದಲ್ಲಿ ಹಾಡಿ ಈಗಾಗಲೇ ಕೇಳುಗರ ಮನಗೆದ್ದ ಯುವಕಲಾವಿದ. ಪುರಂದರ ದಾಸರ ಪದಗಳನ್ನೇ ಅತ್ಯಂತ ಇಷ್ಟಪಡುವ ಸುಮೇಧ, ದಾಸರ ಪದಗಳಿಂದ ಪ್ರೇರಿತನಾಗಿದ್ದು ತನ್ನ ಹಾಡುಗಳಲ್ಲಿ ಇದೇ ಜಾಡನ್ನು ಬಳಸಿ ಸ್ವತಂತ್ರವಾಗಿ ಸಂಗೀತ ಸಂಯೋಜನೆ ಮಾಡಿ ಹಾಡಿದ್ದಾರೆ.

ನೀಡುವ ನಾದ ನಿನಾದ, ಕೇಳುತ್ತಾ ಇದ್ದರೆ ಅದೇನೋ ಒನಪು, ಮನಸ್ಸಿಗೆ ಇಂಪು–ಕಂಪು ಏನೆಲ್ಲ... ಇದು ಇಂಡೀ ಸಂಗೀತದ ವೈಶಿಷ್ಟ್ಯ. ಯುವಜನರ, ಇಂದಿನ ಪೀಳಿಗೆಯ ಸಂಗೀತ ರಸಿಕರ ಮನಗೆದ್ದ, ಹೃದಯ ಕದ್ದ 'ಚೋರ ಸಂಗೀತ' ಎಂದೂ ವ್ಯಾಖ್ಯಾನಿಸಬಹುದು. ಇದು ಸಿನಿಮಾ ಸಂಗೀತವಲ್ಲ, ಶಾಸ್ತ್ರೀಯ, ಜಾನಪದ, ಸುಗಮ, ಭಕ್ತಿ, ದೇಶಭಕ್ತಿ ಯಾವುದೇ ಪ್ರಕಾರವಲ್ಲ, ಆದರೆ ಎಲ್ಲ ಪ್ರಕಾರದ ಹೂರಣವನ್ನು ಒಳಗೊಂಡ ಸ್ವತಂತ್ರ ಸಂಗೀತ. ಇಂಡೀ ಸಂಗೀತದಲ್ಲಿ ಸೃಜನಶೀಲತೆ, ಕ್ರಿಯಾಶೀಲತೆ, ಗಾಯಕನ ಭಾವನೆ ಹಾಗೂ ಮನೋಧರ್ಮವೇ ಜೀವಾಳ. ಇದೇ ಬಂಡವಾಳವಿದ್ದರೆ ಇಂಡೀ ಗಾಯಕ ಗೆದ್ದಂತೆ.

ಇಂಡಿ (Indie) ಸಂಗೀತ ಎಂದರೆ ಪ್ರಮುಖ ವಾಣಿಜ್ಯ ರೆಕಾರ್ಡ್ ಲೇಬಲ್‌ಗಳ ನಿಯಂತ್ರಣವಿಲ್ಲದೆ, ಸ್ವತಂತ್ರವಾಗಿ ಕಲಾವಿದರು ನಿರ್ಮಿಸುವ ಸಂಗೀತ. ರಾಕ್, ಪಾಪ್, ಇಂಡೀಟ್ರೋನಿಕಾದಂತಹ ವಿವಿಧ ಶೈಲಿಗಳನ್ನು ಒಳಗೊಂಡಿದ್ದು, ಕಲಾತ್ಮಕತೆಗೆ ಹೆಚ್ಚು ಒತ್ತು ನೀಡುವಂತಹ ಸಂಗೀತ. ಇಲ್ಲಿ ಹೊಸ ಶಬ್ದಗಳನ್ನು, ಭಾವನೆಗಳನ್ನು ಅಭಿವ್ಯಕ್ತಿಸುವ ಪ್ರಯೋಗಕ್ಕೆ ಆದ್ಯತೆ. ಈ ಸಂಗೀತ ಸ್ವತಂತ್ರ ಅಭಿವ್ಯಕ್ತಿಯ ಒಂದು ಪ್ರಕಾರ ಎನ್ನಬಹುದು. ಇದು ಮುಖ್ಯವಾಹಿನಿಯ ಸಂಗೀತ (Mainstream Music) ಶೈಲಿಗಿಂತ ಭಿನ್ನವಾದ, ವಿಶಿಷ್ಟವಾದ, ಮತ್ತು ಹೆಚ್ಚಾಗಿ ಪ್ರಯೋಗಾತ್ಮಕ ಧ್ವನಿಯನ್ನು ಹೊಂದಿರುತ್ತದೆ. ಅಲ್ಲದೆ ಈ ಸಂಗೀತವನ್ನು 'ನೀವೇ ಮಾಡಿ' (Do It Yourself) ಎಂಬ ಮನೋಭಾವದೊಂದಿಗೆ, ಕಡಿಮೆ ಬಜೆಟ್‌ನಲ್ಲಿ ರಚಿಸಲಾಗುತ್ತದೆ.

## ಮುಕ್ತ ವೇದಿಕೆ

'ಸಿನಿಮಾ ಸಂಗೀತ ಅದರಲ್ಲೂ ಚಂದನವನ, ಬಾಲಿವುಡ್ ಹಾಡುಗಳು ಯುವಜನರಿಗೆ ಎಂದಿಗೂ ಆಪ್ಯಾಯಮಾನ, ಬಾಲಿವುಡ್ ಮತ್ತು ಕ್ರಿಕೆಟ್ ಮನರಂಜನಾ ಉದ್ಯಮವನ್ನು ಆಳುವ ಸಂಗೀತ ಸಾಗರದಲ್ಲಿ, ಈಗೀಗ ಇಂಡೀ ಸಂಗೀತವು ನಿಧಾನವಾಗಿ ತನ್ನ ಛಾಪನ್ನು ಮೂಡಿಸಲಾರಂಭಿಸಿದೆ. ಇದರಿಂದ ಯುವಕಲಾವಿದರಿಗೆ ಮುಕ್ತ ವೇದಿಕೆ ಸಿಕ್ಕಿದ ಹಾಗಾಗಿದೆ' ಎನ್ನುವುದು ಬಾಲಿವುಡ್ ಹಿನ್ನೆಲೆ ಗಾಯಕ ಶ್ರವಣ್ ಜೆ. ನಾಯರ್ ಅವರ ಅನಿಸಿಕೆ.

'ಈಗ ಹಿಪ್‌ಹಾಪ್ ಬಹಳಷ್ಟು ವಿಕಸನಗೊಂಡಿದೆ ಮತ್ತು ಯುವ ಗಾಯಕರು ತಮ್ಮದೇ ಆದ ಶೈಲಿ ಮತ್ತು ಧ್ವನಿಗಳೊಂದಿಗೆ ಮಿಂಚುತ್ತಿದ್ದಾರೆ' ಎಂದೂ ಹೇಳುತ್ತಾರೆ ಶ್ರವಣ್.

ಜೆನ್‌ಝೀ ಪೀಳಿಗೆಯವರಿಗಾಗಿ ಇಂಡೀ ಕಲಾವಿದರು ಡಿಜಿಟಲ್ ಪ್ಲಾಟ್‌ಫಾರ್ಮ್‌ಗಳಲ್ಲಿ ಈ ಸಂಗೀತವನ್ನು ಹೆಚ್ಚಿನ ಪ್ರೇಕ್ಷಕರನ್ನು ತಲುಪಿಸುತ್ತಾರೆ. ಇಲ್ಲಿ ಶಾಸ್ತ್ರೀಯ ಸಂಗೀತದ ಕಟ್ಟುಪಾಡುಗಳಿಲ್ಲವಾದರೂ ರಾಗ ತಾಳ ಭಾವ ಲಯ ನಾದ ಇದೆ. ಸಂಗೀತದಲ್ಲಿ ಒನಪು, ಬಿಸುಪು ವೈಯಾರ ಶೃಂಗಾರವಿದೆ. ಮನಸ್ಸನ್ನು ಆರ್ದ್ರಗೊಳಿಸಿ ಮನದಲ್ಲಿ ಭಾವ– ಭಾವನೆಗಳ ಚಿತ್ತಾರ ಮೂಡಿಸುವ ಬೆಚ್ಚನೆಯ ಲಾಸ್ಯವಿದೆ. ಜಗತ್ತಿನ ಜಂಜಡವನ್ನೆಲ್ಲ ಮರೆಸಿ ಮನವನ್ನು ಮುದಗೊಳಿಸುವ, ಹೃದಯ ತಟ್ಟುವ, ಸೌಹಾರ್ದ–ಸಮನ್ವಯತೆ ಬೆಸೆಯುವ ಅಪೂರ್ವ ಶಕ್ತಿ ಈ ಸಂಗೀತಕ್ಕಿದೆ. ಯುವಮನಸುಗಳಲ್ಲಿ ಕನಸುಗಳನ್ನು ಕಲೆ ಹಾಕಿ ಇವಕ್ಕೆ ರೆಕ್ಕೆಪುಕ್ಕ ಕಟ್ಟಿ ಗಾಳಿಯಲ್ಲಿ ಸ್ವಚ್ಛಂದವಾಗಿ ತೇಲಾಡುವಂತಹ ಭಾವಬಿಂಬ ಮೂಡಿಸುವ ಅದ್ಭುತ ಸಂಗೀತವಿದು.

ಹಾಗೆ ನೋಡಿದರೆ ಇಂಡೀ ಈಗ ದಿಢೀರ್ ಎಂದು ಉದ್ಭವಿಸಿದ್ದಲ್ಲ. ಸುಗಮ ಸಂಗೀತಗಾರರಾದ ಸಿ. ಅಶ್ವಥ್, ರಾಜು ಅನಂತಸ್ವಾಮಿ ಅವರ ಕಾಲದಲ್ಲೇ ಪ್ರಚಲಿತದಲ್ಲಿತ್ತು. ಆಮೇಲೆ ಮರೆಯಾಗಿತ್ತು. ಈಗ ಯುವ ಗಾಯಕರು ಮರುಜೀವ ನೀಡಿದ್ದಾರೆ. ಇಂದಿನ ಪೀಳಿಗೆಗೆ ಅತ್ಯಂತ ಸೂಕ್ತ ಈ ಸಂಗೀತ.

ಹಿಂದಿ, ತಮಿಳು, ತೆಲುಗು, ಮಲಯಾಳಂ ಎಲ್ಲ ಭಾಷೆಗಳಲ್ಲಿ ಇಂಡೀ ಸಂಗೀತವಿದೆ. ಕನ್ನಡದಲ್ಲಿ ಈಗೀಗ ಜನಪ್ರಿಯ ಆಗುತ್ತಿದೆ. ಭಾರತದಲ್ಲಿ ಐದಾರು ದಶಕಗಳಿಂದ ಇಂಡೀ ಸಂಗೀತ ಇದೆ. 'ಅಲಿಷಾ ಚಿನೋಯ್' ಮೇಡ್ ಇನ್ ಇಂಡಿಯಾ ಹಾಡು ಮಾಡಿ ಜನಪ್ರಿಯರಾದವರು, ಗಾಯಕ ಹರಿಹರನ್ ಮಾಡಿದ 'ಕೊಲೊನಿಯಲ್ ಕಸಿನ್ಸ್'

